ಈ ಲೇಖನದ ವಿಷಯಾನುಕ್ರಮಣಿಕೆ


ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಹದಿನೈದನೆಯ ಪದ್ಯ 2

ನಾಗನಗರಿ-ಧರಿತ್ರಿಕೋಶವಿಭಾಗ-ತಂತ್ರ-ನಿಯೋಗ-ಗಮನ-ಸರಾಗ 2

ಪಾಂಡವರಾಜಜಿತಸಂಗ್ರಾಮ 7

ನಿಸ್ಸೀಮ 8

ಯೋಗಗಮ್ಯ 9

ಭವಾಖ್ಯ-ವಿಷ-ಧರ-ನಾಗ-ಗಾರುಡಮಂತ್ರ-ವಿದ 10

ಭವರೋಗವೈದ್ಯ 10

ವಿಚಿತ್ರ 12

# ವಿಶ್ವನಂದಿನಿ ಲೇಖನಮಾಲೆ — 45

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಹದಿನೈದನೆಯ ಪದ್ಯ

**ನಾಗನಗರಿಧರಿತ್ರಿಕೋಶವಿ-**
**ಭಾಗತಂತ್ರನಿಯೋಗಗಮನಸ-**
**ರಾಗ ಪಾಂಡವರಾಜಜಿತಸಂಗ್ರಾಮ ನಿಸ್ಸೀಮ ।**
**ಯೋಗಗಮ್ಯ ಭವಾಖ್ಯವಿಷಧರ-**
**ನಾಗಗಾರುಡಮಂತ್ರವಿದ ಭವ-**
**ರೋಗವೈದ್ಯ ವಿಚಿತ್ರ ರಕ್ಷಿಸು ನಮ್ಮನನವರತ ॥ ೧೫ ॥**

## ನಾಗನಗರಿ-ಧರಿತ್ರಿಕೋಶವಿಭಾಗ-ತಂತ್ರ-ನಿಯೋಗ-ಗಮನ-ಸರಾಗ

ವಿಸ್ತೃತವಾದ ಘಟನಾವಳಿಗಳನ್ನು ದಾಸರು ಒಂದೇ ವಾಕ್ಯದಲ್ಲಿ ಕೂಡಿಸಿ ಚಿಂತನೆ ಮಾಡುತ್ತಿದ್ದಾರೆ. ದ್ರೌಪದಿಯ ಮದುವೆಯಾದ ಬಳಿಕ ಪಾಂಡವರು ಹಸ್ತಿನಾವತಿಗೆ ಹಿಂತಿರುಗುತ್ತಾರೆ. ಅವರನ್ನು ಅರಗಿನ ಮನೆಯಲ್ಲಿ ಕೊಲ್ಲಲು ಹೂಡಿದ

ದಯೋರ್ಧನನ ಉಪಾಯ ರಹಸ್ಯವಾಗಿ ಉಳಿದಿರುವದಿಲ್ಲ. ಅದಲ್ಲದೇ ಜರಾಸಂಧ ದುಯೋರ್ಧನಾದಿಗಳನ್ನು ಕಟ್ಟಿ ಹಾಕಿದಾಗ ಭೀಮನೇ ಹೋಗಿ ಬಿಡಿಸಿ ಕೊಂಡು ಬಂದಿರುತ್ತಾನೆ. ದ್ರೌಪದಿಯ ಸೌಂದರ್ಯವನ್ನು ಕಂಡು ತನ್ನ ಮಕ್ಕಳು ಎಲ್ಲೆ ಮೀರುತ್ತಾರೆ ಎಂದು ಗಾಂಧಾರಿ ಪ್ರತಿಕ್ಷಣವೂ ಆತಂಕಕ್ಕೊಳಗಾಗುತ್ತಿರುತ್ತಾಳೆ. ಆದರೆ ಮಹಾಬಲಿಷ್ಠರಾದ ಪಾಂಡವರನ್ನು ಹೊರಹಾಕುವದು ಸುಲಭದ ಮಾತಾಗಿರುವದಿಲ್ಲ. ಆದರೆ ಕೌರವ ಪಾಂಡವರಿಬ್ಬರೂ ಒಂದೇ ಕಡೆಯಲ್ಲಿದ್ದರೆ ಕುಲವಿನಾಶವಾಗುವದು ನಿಶ್ಚಿತ ಎಂದು ಭೀಷ್ಮ ದ್ರೋಣ ವಿದುರರು ಧೃತರಾಷ್ಟ್ರನಿಗೆ ಮೇಲಿಂದ ಮೇಲೆ ಎಚ್ಚರ ನೀಡುತ್ತಿರುತ್ತಾರೆ. ಹೀಗಾಗಿ ಪಾಂಡವರನ್ನು ತನ್ನ ರಾಜ್ಯದಿಂದ ಹೊರ ಹಾಕುವದಕ್ಕೆ ಧೃತರಾಷ್ಟ್ರನಿಗೆ ಉಳಿಯುವ ಒಂದೇ ದಾರಿ ರಾಜ್ಯ-ಕೋಶಗಳ ವಿಭಾಗ. ಧರ್ಮರಾಜನನ್ನು ಕರೆದು ನಿನಗೆ ಅರ್ಧಕೋಶವನ್ನು ನೀಡುತ್ತೇನೆ, ಖಾಂಡವವನಕ್ಕೆ ತೆರಳಿ ಅಲ್ಲಿ ರಾಜ್ಯವನ್ನು ಕಟ್ಟಿಕೊ ಎಂದು ಹೇಳುತ್ತಾನೆ. ಧರ್ಮರಾಜ ಅದಕ್ಕೆ ಉತ್ತರವಾಗಿ **“ಕೇಶವೋ ಯದಿ ಮನ್ಯೇತ ತತ್**

**ಕರ್ತವ್ಯಮಸಂಶಯಮ್”** ಎಂದು ಶ್ರೀಕೃಷ್ಣ ಒಪ್ಪಿದಲ್ಲಿ ನಾನು ನಿಶ್ಚಿತವಾಗಿ ನಿಮ್ಮ ಮಾತನ್ನು ನಡೆಸುತ್ತೇನೆ ಎಂದು ಹೇಳುತ್ತಾನೆ. ಶ್ರೀಕೃಷ್ಣ ಅದಕ್ಕೆ ಒಪ್ಪಿಗೆ ನೀಡುತ್ತಾನೆ. ಕಾರಣ, ಶ್ರೀಕೃಷ್ಣನಿಗೆ ಆ ಮುಖಾಂತರ ನಾಡಿನ ಭಾಗವನ್ನು ಮಕ್ಕಳಿಗೆ, ಕಾಡಿನ ಭಾಗವನ್ನು ತಮ್ಮನ ಮಕ್ಕಳಿಗೆ ನೀಡಿದ ಧೃತರಾಷ್ಟ್ರನ ವೈಷಮ್ಯವನ್ನು ಸಾರಿ ತೋರಿಸಬೇಕಾಗಿತ್ತು. ಕಾಡಿನ ಭಾಗದಲ್ಲಿಯೂ ಪಾಂಡವರಿಂದ ಸಮರ್ಥ ರಾಜ್ಯವನ್ನು ಕಟ್ಟಿ ಸಿ, ಭುವನಾದ್ಭುತವಾದ ಸಭೆಯನ್ನು ಅಲ್ಲಿ ನಿರ್ಮಿಸಿ, ಸಮಗ್ರ ಭೂಮಂಡಲವನ್ನು ಗೆಲ್ಲಿಸಿ ಅವರಿಂದ ರಾಜಸೂಯಯಾಗವನ್ನು ಮಾಡಿಸಿ ಪಾಂಡವರ ಅದ್ಭುತ ಪರಾಕ್ರಮವನ್ನು ಜಗತ್ತಿಗೆ ಪರಿಚಯಿಸಬೇಕಾಗಿತ್ತು. ಹೀಗಾಗಿ ತಾನು ಒಪ್ಪಿಗೆ ನೀಡದಿದ್ದರೆ ತೊಡಕಾಗಬಹುದಾಗಿದ್ದ ಪಾಂಡವರ ನಿರ್ಗಮನವನ್ನು ಶ್ರೀಕೃಷ್ಣ ಸರಾಗವನ್ನಾಗಿ ಮಾಡುತ್ತಾನೆ. ಇವಿಷ್ಟು ಕಥೆಗಳನ್ನು ದಾಸರು ಇಲ್ಲಿ ಒಂದೇ ಪದದಲ್ಲಿ ಹುದುಗಿಸಿಟ್ಟಿದ್ದಾರೆ.

ಮೊದಲಿಗೆ ಪದಗಳ ಅರ್ಥ ತಿಳಿದು ಬಳಿಕ ಅವುಗಳ ಪರಸ್ಪರ ಸಂಬಂಧವನ್ನು ತಿಳಿಯೋಣ.

ನಾಗನಗರಿ ಎಂದರೆ ಹಸ್ತಿನಾವತಿ. ನಾಗ, ನಾಗೇಂದ್ರ ಎಂದರೆ ಆನೆ ಎಂದೂ ಅರ್ಥವಿದೆ. “ನಾಗೇಂದ್ರೋ ನಿಶಿತಾಂಕುಶೇನ ಸಮದೋ” “ಮದದಿಂದ ಉನ್ಮತ್ತವಾದ ಆನೆಯನ್ನು ಮಣಿಸಲು ಒಂದು ಹರಿತವಾದ ಅಂಕುಶ ಸಾಕು” ಎಂದೆಲ್ಲ ಸಂಸ್ಕೃತದಲ್ಲಿ ಸಾಕಷ್ಟು ಪ್ರಯೋಗವಿದೆ. ಹೀಗಾಗಿ ನಾಗನಗರಿ ಎಂದರೆ ಹಸ್ತಿನಾವತಿ.

ಧರಿತ್ರಿ ಎಂದರೆ ಭೂಮಿ.

ಕೋಶ ಎಂದರೆ ರಾಜ್ಯದ ಬೊಕ್ಕಸ.

ತಂತ್ರ ಎನ್ನುವ ಶಬ್ದಕ್ಕೆ ಮನೆತನಕ್ಕೆ ಸಂಬಂಧಪಟ್ಟ ಮಹತ್ತ್ವದ ಕಾರ್ಯ ಎಂದರ್ಥ.

“ತಂತ್ರಂ ಕುಟುಂಬಕೃತ್ಯೇ ಸ್ಯಾತ್ ಸಿದ್ಧಾಂತೇ ಚೌಷಧೋತ್ತಮೇ”

ಎಂದು ಮೇದಿನೀಕೋಶ ತಿಳಿಸುತ್ತದೆ. ವಿಭಾಗತಂತ್ರ ಎಂದರೆ ರಾಜ್ಯವಿಭಾಗದ ಮಹತ್ವದ ಕಾರ್ಯ ಎಂದರ್ಥ.

ನಾಗನಗರಿಯ ಧರಿತ್ರಿಕೋಶವಿಭಾಗದ ತಂತ್ರದಲ್ಲಿ ನಿಯೋಗಗೊಂಡು ಗಮನವನ್ನು ಪರಾಗಗೊಳಿಸಿದವನು ಎನ್ನುವದು ವಿಗ್ರಹವಾಕ್ಯ.

**ನಾಗನಗರಿಯ** ಹಸ್ತಿನಾವತಿಯ **ಧರಿತ್ರಿಕೋಶವಿಭಾಗದ** - ಎಷ್ಟು ಭೂಮಿ ಎಷ್ಟು ಕೋಶ ಕೌರವರಲ್ಲಿ ಉಳಿಯಬೇಕು ಎಷ್ಟು ಪಾಂಡವರಿಗೆ ಸೇರಬೇಕು ಎಂಬ ವಿಭಾಗದ - ಹಕ್ಕುವಿಭಜನೆಯ **ತಂತ್ರದಲ್ಲಿ** - ಮಹತ್ತ್ವದ ಗೃಹಕೃತ್ಯದಲ್ಲಿ - **ನಿಯೋಗಗೊಂಡವನಾಗಿ** ದುರ್ಯೋಧನ ಧೃತರಾಷ್ಟ್ರರಿಗೆ ಅಪೇಕ್ಷಿತವಾಗಿದ್ದ ಗಮನವನ್ನು ಪಾಂಡವರ ನಿರ್ಗಮನವನ್ನು ಪರಾಗಗೊಳಿಸಿದವನು, ಪಾಂಡವರು ಸಂತೋಷದಿಂದ ಹಸ್ತಿನಾವತಿಯನ್ನು ಬಿಟ್ಟು ಖಾಂಡವಪ್ರಸ್ಥಕ್ಕೆ ಹೋಗುವ ಹಾಗೆ ಮಾಡಿದವನು.

ಪಾಂಡವರು ಪೂರ್ಣಭಾರವನ್ನು ಶ್ರೀಕೃಷ್ಣನ ಮೇಲೆ ಹೊರಿಸಿದ್ದರಿಂದ ಅಧಿಕೃತವಾಗಿ ಆ ಹೊಣೆಯನ್ನು ಹೊತ್ತು, ಪಾಂಡವರ ಮಾಹಾತ್ಮ್ಯವನ್ನು ಜಗತ್ತಿನಲ್ಲಿ ಪ್ರಕಾಶಪಡಿಸಲು ಈ ವಿಭಾಗಕಾರ್ಯ ಮತ್ತು ಪಾಂಡವರ ಹಸ್ತಿನಾವತಿಯಿಂದ ನಿರ್ಗಮನ

ಇವೆರಡನ್ನೂ ಸರಾಗವಾಗಿ ನೆರವೇರುವನಂತೆ ಮಾಡಿದವನು.  ನಾಗ-ನಗರಿ-ಧರಿತ್ರಿ-ಕೋಶ-ವಿಭಾಗ-ತಂತ್ರ-ನಿಯೋಗ-ಗಮನ-ಸರಾಗ.

ಶ್ರೀಕೃಷ್ಣ ಒಪ್ಪಿದ್ದಕ್ಕಾಗಿಯೇ ಪಾಂಡವರು ಖಾಂಡವಪ್ರಸ್ಥಕ್ಕೆ ಬಂದದ್ದು ಎಂಬ ಮಾತು ಮಹಾಭಾರತದಲ್ಲಿ ಸ್ಪಷ್ಟವಾಗಿ ಬಂದಿದೆ --

**"ವಾಸುದೇವೇನ ಸಂಮಂತ್ರ್ಯಪಾಂಡವಾಃ ಸಮುಪಾವಿಶನ್"**

ಶ್ರೀಕೃಷ್ಣನೊಡನೆ ಮಂತ್ರಾಲೋಚನೆಯನ್ನು ಮಾಡಿ ಅವನ ಒಪ್ಪಿಗೆಯನ್ನು ಪಡೆದೇ ಪಾಂಡವರು ಖಾಂಡವಪ್ರಸ್ಥವನ್ನು ಪ್ರವೇಶಿಸಿದರು ಎಂದು ಈ ಶ್ಲೋಕದ ಅರ್ಥ.

## ಪಾಂಡವರಾಜಜಿತಸಂಗ್ರಾಮ

ಹೀಗೆ ಪಾಂಡವರಿಗೆ ಅರ್ಧರಾಜ್ಯ ಕೊಡಿಸಿ ರಾಜರನ್ನಾಗಿ ಮಾಡಿ ಅಷ್ಟರಲ್ಲಿಯೇ ತೃಪ್ತನಾಗದೇ ಅವರಿಂದ ನಾಲ್ಕೂ ದಿಕ್ಕುಗಳ ದಿಗ್ವಿಜಯವನ್ನು ಮಾಡಿಸಿ ಪ್ರತಿಯೊಂದು ಸಂಗ್ರಾಮದಲ್ಲಿಯೂ

ಅವರಿಗೆ ಗೆಲುವನ್ನಿತ್ತವನು ಶ್ರೀಕೃಷ್ಣ. ಪಾಂಡವರೆಂಬ ರಾಜರಿಂದ ಗೆಲ್ಲಿಸಲ್ಪಟ್ಟ ಯುದ್ಧಗಳುಳ್ಳವನು ಪಾಂಡವರಾಜಜಿತಸಂಗ್ರಾಮ. ಬಳಿಕ ಅವರಿಂದ ರಾಜಸೂಯವನ್ನು ಮಾಡಿಸಿ ಅವರನ್ನು ಭೂಮಂಡಲದ ಚಕ್ರವರ್ತಿಗಳನ್ನಾಗಿ ಮಾಡಿದವನು.

## ನಿಸ್ಸೀಮ

ಈ ರೀತಿಯಲ್ಲಿ ಪಾಂಡವರನ್ನು ಅಡಿಗಡಿಗೆ ರಕ್ಷಿಸುತ್ತಾ ತಾನು ಭಕ್ತರ ಮೇಲೆ ಕಾರುಣ್ಯ ತೋರುವಲ್ಲಿ ನಿಸ್ಸೀಮ ಎಂದು ಸಾರಿದವನು. ವಿಧವಿಧ ಕೌಶಲಗಳನ್ನು ಪ್ರದರ್ಶಿಸಿ ಜಾಣ್ಮೆಯಲ್ಲಿ ನಿಸ್ಸೀಮ ಎಂದು ಕರೆಸಿಕೊಂಡವನು. ಮತ್ತೊಬ್ಬರಿಂದ ಸುಡಲಾಗದ ಖಾಂಡವವನ್ನು ಸುಡಿಸಿ, ವಿಶ್ವಕರ್ಮನನ್ನು ಕರೆಯಿಸಿ ಅವನಿಂದ ಅದ್ಭುತವಾದ ನಗರವನ್ನು ಕಟ್ಟಿಸಿ, ಮಯನಿಂದ ಮಹಾವೈಚಿತ್ರ್ಯಗಳನ್ನುಳ್ಳ ಒಂದು ಸಭೆಯನ್ನು ಕಟ್ಟಿಸಿ, ಭೀಮನಿಂದ ಜರಾಸಂಧನನ್ನು ಕೊಲ್ಲಿಸಿ, ಆ ಭೀಮನಿಂದಲೇ ಕರ್ಣನನ್ನು ಸೋಲಿಸಿ, ಅರ್ಜುನನಿಂದ ಭೂರಿಸಂಪತ್ತನ್ನು ತರಿಸಿ ಅನ್ಯರಿಗೆ ಮಾಡಲಸಾಧ್ಯವಾದ ರೀತಿಯಲ್ಲಿ

ರಾಜಸೂಯವನ್ನು ಅವರಿಂದ ಮಾಡಿಸಿ, ಅಸಾಧ್ಯವಾದುದನ್ನು ಸಾಧಿಸುವ ತನ್ನ ಅಘಟಿತಘಟನಾಸಾಮರ್ಥ್ಯವೂ ನಿಸ್ಸೀಮ ಎಂದು ತೋರಿಸಿಕೊಟ್ಟವನು.

## ಯೋಗಗಮ್ಯ

ಯೋಗ ಎಂದರೆ ಉಪಾಯ. ಪರಮಾತ್ಮನನ್ನು ಪಡೆಯಲಿಕ್ಕೆ ಅನುಸರಿಸಬೇಕಾದ ಅನುಷ್ಠಾನಕ್ಕೆ ತಂದುಕೊಳ್ಳಬೇಕಾದ ಉಪಾಯಗಳು ಮೂರು.

ಕರ್ಮಯೋಗ. ಶಾಸ್ತ್ರಗಳು ತಿಳಿಸುವ ರೀತಿಯಲ್ಲಿ ನಿಷ್ಕಾಮಕರ್ಮಗಳ ಆಚರಣೆ.

ಜ್ಞಾನಯೋಗ. ಶಾಸ್ತ್ರಗಳನ್ನು ನಿರಂತರ ಅಧ್ಯಯನ ಮಾಡುತ್ತಾ ಪರೋಕ್ಷಜ್ಞಾನ ಮತ್ತು ಧ್ಯಾನಾದಿಗಳನ್ನು ಅನುಷ್ಠಾನ ಮಾಡುತ್ತಾ ಅಪರೋಕ್ಷಜ್ಞಾನವನ್ನು ಪಡೆಯುವದು.

## ಭಕ್ತಿಯೋಗ

ಪಡೆಯುವ ಜ್ಞಾನ, ಮಾಡುವ ಕರ್ಮ ಎಲ್ಲದಕ್ಕೂ ಸಾಫಲ್ಯವನ್ನು ನೀಡುವ ಅತೀ ಮಹತ್ತ್ವದ ವಸ್ತು ಭಕ್ತಿ. ನಿಷ್ಕಪಟವಾದ, ನಿರ್ವ್ಯಾಜವಾದ, ನಿರಂತರವಾದ, ನಿಶ್ಚಲವಾದ ಯೋಗ್ಯತೆಯಂತೆ ಪರಿಪೂರ್ಣವಾದ ಅತೀಪರಿಪಕ್ವಾವಸ್ಥೆಯನ್ನು ಮುಟ್ಟಿದ ಭಕ್ತಿ ಮನುಷ್ಯನನ್ನು ಭಗವಂತನ ಬಳಿ ಕರೆದುಕೊಂಡು ಹೋಗುತ್ತದೆ. ಭಕ್ತಿಯೋಗದಿಂದ ಸಹಿತವಾದ ಕರ್ಮಯೋಗ ಮತ್ತು ಜ್ಞಾನಯೋಗಗಳನ್ನು ಅನುಷ್ಠಾನ ಮಾಡುವ ಸಾಧಕರಿಗೆ ದೊರೊಯುವವನು ಯೋಗಗಮ್ಯ.

## ಭವಾಖ್ಯ-ವಿಷ-ಧರ-ನಾಗ-ಗಾರುಡಮಂತ್ರ-ವಿದ ಭವರೋಗವೈದ್ಯ

ಭವಾಖ್ಯವಿಷಧರನಾಗ - ಭವವೆಂಬ ಹೆಸರುಳ್ಳ ವಿಷವನ್ನು ಹೊತ್ತ ನಾಗವನ್ನು ಕೊಲ್ಲುವ ಅದರ ಬಾಧೆಯನ್ನು ಪೂರ್ಣವಾಗಿ ಕಳೆಯುವ ಗಾರುಡಮಂತ್ರವಿದ ಗರುಡಮಂತ್ರವನ್ನು ತಿಳಿದ ವೈದ್ಯ ಎಂದರ್ಥ.

ಹಾವು ಕಚ್ಚಿದ ವ್ಯಕ್ತಿಯನ್ನು ಗರುಡಮಂತ್ರದ ಸಿದ್ಧಿಯನ್ನು ಪಡೆದಿರುವ ವೈದ್ಯ ಮಂತ್ರಪಠಣವನ್ನು ಮಾಡಿ ಅವನನ್ನು ಮುಟ್ಟಿದರೆ ವಿಷದ ಬಾಧೆ ನೀಗುತ್ತದೆ. ಕಂಡಕಂಡಲ್ಲಿ ಹರಿದಾಡುವ ಈ ಹಾವಿನ ವಿಷವನ್ನು ತಗ್ಗಿಸುವ ಗರುಡಮಂತ್ರವನ್ನು ತಿಳಿದ ಜನ ಸಾಕಷ್ಟು ಇದ್ದಾರು. ಆದರೆ, ಸಂಸಾರವೆಂಬ ಘೋರವಿಷದ ಸರ್ಪ ಕಚ್ಚಿದಾಗ ಅದರ ವಿಷ ಮೈಯೇರಿ ಜೀವ ಈ ಭವಬಂಧನದಲ್ಲಿ ವಿಲಿವಿಲಿ ಒದ್ದಾಡುವಾಗ ಅವನನ್ನು ರಕ್ಷಿಸುವ, ಭವಸರ್ಪದ ಬಾಧೆಯನ್ನು ನೀಗಿಸುವ ಗರುಡಮಂತ್ರವನ್ನು ತಿಳಿದವ ಭಗವಂತನನ್ನು ಬಿಟ್ಟರೆ ಮತ್ತೊಬ್ಬನಿಲ್ಲ. ಅವನೇ ರಕ್ಷಿಸಬೇಕು. ಕಾರಣ ಏಳು ತರಹದ ಈ ಭವಬಂಧನವನ್ನು ಕಳುಚವ ಪರಿ ಅವನಿಗೊಬ್ಬನಿಗೇ ಗೊತ್ತಿರುವದು.

ಏಕೆಂದರೆ ಅವನು ಭವರೋಗವೈದ್ಯ. ಪರಮಾತ್ಮ ಈ ಭವರೋಗವನ್ನು ಕಳೆಯುವ ವೈದ್ಯ ಎಂದೇ ವೇದ ಪುರಾಣಗಳಲ್ಲಿ ಪ್ರಸಿದ್ಧನಾದವನು.

ವೈದ್ಯ ಎಂದರೆ ರೋಗದ ಬಗ್ಗೆ ತಿಳಿದಿರಬೇಕು, ರೋಗ ಹೇಗೆ ಹುಟ್ಟುತ್ತದೆ ಹೇಗೆ ವಿನಾಶವಾಗುತ್ತದೆ ಎಂಬುದನ್ನೂ ತಿಳಿದರಬೇಕು, ವಿನಾಶ ಪಡಿಸುವ ಕ್ರಮವನ್ನೂ ತಿಳಿದಿರಬೇಕು, ವಿನಾಶ ಪಡಿಸುವ ಕೈಗುಣವೂ ಇರಬೇಕು. ಇವೆಲ್ಲವೂ ಇದ್ದಾಗ ಅವನನ್ನು ವೈದ್ಯ ಎಂದು ಕರೆಯುತ್ತಾರೆ. ಜೀವನಿಗೆ ಪರಮಾತ್ಮನ ಅವಜ್ಞೆಯಿಂದ ಉಂಟಾದ ಸಂಸಾರವನ್ನು, ಅವನಿಗೆ ತನ್ನ ಜ್ಞಾನವನ್ನು ನೀಡಿ ವಿನಾಶಪಡಿಸುವ ಸಾಮರ್ಥ್ಯ, ಕಾರುಣ್ಯ ಎರಡೂ ಭಗವಂತನಲ್ಲಿವೆ, ಆದ್ದರಿಂದ ಅವನು ಭವರೋಗವೈದ್ಯ.

## ವಿಚಿತ್ರ

ಆದರೆ ಎಲ್ಲ ವೈದ್ಯರಂತಲ್ಲ ಈ ವೈದ್ಯ. ವಿಚಿತ್ರ ವೈದ್ಯ.

ಲೋಕದಲ್ಲಿ ರೋಗಿಗಳು ವೈದ್ಯರನ್ನು ಹುಡುಕಿಕೊಂಡು ಹೋದರೆ ಈ ವೈದ್ಯ ತಾನಾಗಿ ರೋಗಿಗಳ ಬಳಿ ಬರುತ್ತಾನೆ. **“ಯಮೇವೈಷ**

**ವೃಣುತೇ ತೇನ ಲಭ್ಯಃ”** ಯಾರ ಬಳಿ ಹೋಗುತ್ತಾನೆಯೋ ಅವನೇ ಪುಣ್ಯವಂತ.

ಲೋಕದಲ್ಲಿನ ಎಲ್ಲ ವೈದ್ಯರು ರೋಗಿಗಳ ಬಳಿ ಇರುವ ಹಣವನ್ನು ಬಯಸುತ್ತಾರೆ. ನಿಮ್ಮ ಚಿತ್ರವನ್ನಿಟ್ಟು ಮನೆಯಲ್ಲಿ ಪೂಜೆ ಮಾಡುತ್ತೇವೆ, ಚಿಕಿತ್ಸೆ ನೀಡಿ ಎಂದರೆ ಯಾವ ವೈದ್ಯನೂ ಚಿಕಿತ್ಸೆ ನೀಡಲು ಮುಂದಾಗುವದಿಲ್ಲ. ಆದರೆ ಈ ಭವರೋಗವೈದ್ಯ ಎಷ್ಟು ವಿಚಿತ್ರ ಎಂದರೆ ರೋಗಿಗಳ ಹಣವನ್ನು , ಅಥವಾ ಮತ್ತೊಂದನ್ನು ಅವನು ಬಯಸುವದಿಲ್ಲ. ನೀನು ನನ್ನಲ್ಲಿ ಭಕ್ತಿ ಮಾಡು ನಾನು ನಿನ್ನ ಭವರೋಗವನ್ನು ಕಳೆಯುತ್ತೇನೆ ಎನ್ನುತ್ತಾನೆ ಈ ವಿಚಿತ್ರವೈದ್ಯ.

ಜಗತ್ತಿನ ಎಲ್ಲ ವೈದ್ಯರೂ ಎಲ್ಲರೂ ಔಷಯನ್ನು ನೀಡಿ ಹೊರಟು ಹೋದರೆ ಈ ವಿಚಿತ್ರ ವೈದ್ಯ ಒಮ್ಮೆ ಔಷಧಿ ನೀಡಿದರೆ ಸಾಕು ಆ ಔಷಧಿ ಕೆಲಸ ಮಾಡಿ ರೋಗ ಗುಣವಾದ ಅನಂತಕಾಲದವರೆಗೂ ಅವನ ಜತೆಯಲ್ಲಿಯೇ ಇದ್ದು ಅವನಿಗೆ ಮತ್ತೆ ಈ ಭವರೋಗ ತಾಗದ ಹಾಗೆ ಕಾಪಾಡುತ್ತಾನೆ.

ಮತ್ತೂ ವಿಚಿತ್ರ ಏನೆಂದರೆ ಈ ವೈದ್ಯನೇ ಔಷಧಿ, ಔಷಧಿಯೇ ವೈದ್ಯ. “ಸಂಸಾರೇ ದಹ್ಯಮಾನಾನಾಮಾಶ್ರಯತ್ವಾತ್ ಸ ಔಷಧಮ್” ಎಂದು ಶ್ರೀಮದಾಚಾರ್ಯರು ತೈತ್ತಿರೀಯ ಉಪನಿಷತ್ತಿನಲ್ಲಿ ತಿಳಿಸುತ್ತಾರೆ.

ಓ ಭಗವಂತ, ನಿನ್ನ ಮಾಹಾತ್ಮ್ಯಗಳು ನನಗೆ ತಿಳಯಲಳವಲ್ಲ. ಪಾಂಡವರ ಯಶೋಮಾರ್ಗವನ್ನು ನಿಷ್ಕಂಟಕವನ್ನಾಗಿ ಮಾಡಿದ ಹಾಗೆ ನನ್ನ ಸಾಧನಮಾರ್ಗವನ್ನು ನಿಷ್ಕಂಟಕವನ್ನಾಗಿ ಮಾಡು. ಕರುಣೆಯಿಂದ ನನ್ನ ಭವವನ್ನು ಪರಿಹರಿಸು.

ಓ ದೇವ ರಕ್ಷಿಸು ನಮ್ಮನನವರತ ॥ ೧೫ ॥

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491